**ದಿಃ11-08-2025 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲು : ಪ್ರತಿವಾದಿಯರ ಪರ ಶ್ರೀ ಜಿ.ಜಿ.ಆರ್. ವಕೀಲರಿಂದಃ**

ನಾನು ಮತ್ತು ನನ್ನ ತಮ್ಮನಾದ 1 ನೇ ವಾದಿ ಚಿತ್ರದುರ್ಗ ಟೌನಿನಲ್ಲಿ ವಾಸ ಇದ್ದೇವೆ. ಕಳೆದ 16 ವರ್ಷಗಳಿಂದ ನಾವು ಚಿತ್ರದುರ್ಗದ ಟೌನಿನಲ್ಲಿಯೇ ವಾಸ ಇದ್ದೇವೆ. ನನ್ನ ತಾಯಿಯಾದ ಹೇಮಾಕ್ಷಮ್ಮ ಮತ್ತು 1 ನೇ ಪ್ರತಿವಾದಿ ನಾನು 10 ನೇ ತರಗತಿ ವ್ಯಾಸಂಗ ಮಾಡುವವರೆಗೂ ಒಟ್ಟಿಗೆ ಇದ್ದೆವು. ನನ್ನ ತಾಯಿ 1 ನೇ ಪ್ರತಿವಾದಿಯನ್ನು ಬಿಟ್ಟುಹೋದ ನಂತರದಲ್ಲಿ ನಾನು ಮತ್ತು ನನ್ನ ತಮ್ಮನಾದ 1 ನೇ ವಾದಿ ಪುನಃ ಯಾವತ್ತು 1 ನೇ ಪ್ರತಿವಾದಿಯನ್ನು ಸಂಪರ್ಕಿಸಿಲ್ಲ. ನನ್ನ ತಾಯಿ ಜೀವಂತ ಇದ್ದಾರೆ. ನಾನು ಈಗ ನನ್ನ ಪತಿಯೊಂದಿಗೆ ವಾಸ ಇದ್ದೇನೆ. ಈ ದಾವೆಯ 1 ರಿಂದ 5 ನೇ ಪ್ರತಿವಾದಿಯರು ಸಿದ್ದಪ್ಪ ಮತ್ತು ಪುಟ್ಟಮ್ಮರವರ ದಂಪತಿಯ ಮಕ್ಕಳು ಎಂದರೆ ಸರಿ. ನನ್ನ ಅಜ್ಜಿಯಾದ ಪುಟ್ಟಮ್ಮರವರ ತವರುಮನೆ ಹೊಳಲ್ಕೆರೆ ತಾಲ್ಲೂಕಿನ ರಾಮಗಿರಿ. ದಾವಾ ಅನುಸೂಚಿತ 1 ನೇ ಖಂಡಿಕೆಯ ಸ್ವತ್ತು ರಾಮಗಿರಿ ಗ್ರಾಮಕ್ಕೆ ಸೇರಿದ್ದು ಎಂದರೆ ಸರಿ.

2. ನಿಪಿ.2 ರ ನೊಂದಣಿ ವಿಭಾಗ ಪತ್ರದಲ್ಲಿ ದಾವಾ ಅನುಸೂಚಿತ 2 ಮತ್ತು 3 ನೇ ಖಂಡಿಕೆಯ ಸ್ವತ್ತುಗಳು ಮಾತ್ರ ಇವೆ ಎಂದರೆ ಸರಿ. ದಿನಾಂಕ 18.10.2022 ರ ನಿಪಿ.2 ರ ನೋಂದಣಿ ವಿಭಾಗ ಪತ್ರವು 2 ಮತ್ತು 3 ನೇ ಖಂಡಿಕೆಯ ಸ್ವತ್ತುಗಳಿಗೆ ಸಂಬಂಧಿಸಿದಂತೆ ವಾದಿಯರ ಹಿಸ್ಸೆಗೆ ಬಂಧನಕಾರಿಯಾಗುವುದಿಲ್ಲ ಎಂದು ಪರಿಹಾರ ಕೋರಿದ್ದೇವೆ ಎಂದರೆ ಸರಿ. ನಿಪಿ.2 ರ ನೋಂದಣಿ ವಿಭಾಗ ಪತ್ರ ಜಾರಿಯಾಗುವ ಪೂರ್ವದಲ್ಲಿಯೇ ದಾವಾ ಅನುಸೂಚಿತ 1 ನೇ ಖಂಡಿಕೆಯ ಸ್ವತ್ತನ್ನು ನಿಪಿ.1 ರಂತೆ ದಿನಾಂಕ 19.01.2021 ರಲ್ಲಿಯೇ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ದಾವಾ ಅನುಸೂಚಿತ 1 ನೇ ಖಂಡಿಕೆಯ ಸ್ವತ್ತು ನಮ್ಮ ಒಟ್ಟು ಕುಟುಂಬಕ್ಕೆ ಸೇರಿದ ಮತ್ತು ಪಿತ್ರಾರ್ಜಿತ ಸ್ವತ್ತು ಎಂಬ ಬಗ್ಗೆ ಪಹಣಿ, ಮುಟೇಷನ್‌ಗಳನ್ನು ನೀಡಿದ್ದೇನೆ. ದಾವಾ ಅನುಸೂಚಿತ 1 ನೇ ಖಂಡಿಕೆಯ ಸ್ವತ್ತು ನನ್ನ ಅಜ್ಜಿಯಾದ ಪುಟ್ಟಮ್ಮರವರಿಂದ ನಮ್ಮ ತಂದೆಗೆ ಬಂದಿತ್ತು. ದಾವಾ ಅನುಸೂಚಿತ 1 ನೇ ಖಂಡಿಕೆಯ ಸ್ವತ್ತು ನನ್ನ ಅಜ್ಜಿಯಿಂದ ನನ್ನ ತಂದೆಗೆ ಬಂದಿರುವ ಬಗ್ಗೆ ಪಹಣಿಯನ್ನು ನೀಡಿರುತ್ತೇನೆ.

3. ನನ್ನ ತಂದೆಯ ತಂದೆಯಾದ ಸಿದ್ದಪ್ಪರವರ ಗ್ರಾಮ ಗೊಪ್ಪೇನಹಳ್ಳಿ. ನನ್ನ ಅಜ್ಜನಾದ ಸಿದ್ದಪ್ಪರವರಿಗೆ ಸೇರಿದ ಸ್ವತ್ತುಗಳು ಚನ್ನಗಿರಿ ತಾಲ್ಲೂಕಿನಲ್ಲಿ ಇವೆ ಎಂದರೆ ಸರಿ. ನನ್ನ ಅಜ್ಜನಾದ ಸಿದ್ದಪ್ಪರವರಿಗೆ ಸೇರಿದ ಸ್ವತ್ತುಗಳ ಕುರಿತು ನನ್ನ ತಂದೆ ಮತ್ತು ಆತನ ಸಹೋದರರು ನಿಪಿ.2 ರಂತೆ ನೋಂದಣಿ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ನಮ್ಮನ್ನು ಬಿಟ್ಟು ವಿಭಾಗ ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ. ನನ್ನ ತಾಯಿ ನನ್ನ ತಂದೆಯ ಮನೆಯನ್ನು ಬಿಟ್ಟುಬಂದು 20 ವರ್ಷಗಳಾಗಿದೆ. 20 ವರ್ಷಗಳ ಅವಧಿಯಲ್ಲಿ ನಮ್ಮ ತಂದೆಯ ಕುಟುಂಬಕ್ಕೆ ಸೇರಿದ ಸ್ವತ್ತುಗಳ ಬಗ್ಗೆ ಏನೆಲ್ಲಾ ವ್ಯವಹಾರ ಆಗಿದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಅನುಸೂಚಿತ 1 ನೇ ಖಂಡಿಕೆಯ ಸ್ವತ್ತನ್ನು ನನ್ನ ಅಜ್ಜಿಯಾದ ಪುಟ್ಟಮ್ಮರವರು ಯಾವ ದಿನಾಂಕದಂದು ಮತ್ತು ಎಷ್ಟು ಪ್ರತಿಫಲದ ಮೊತ್ತಕ್ಕೆ ಕ್ರಯಕ್ಕೆ ಪಡೆದಿದ್ದಾರೆ ಎಂದರೆ ಗೊತ್ತಿಲ್ಲ. ದಾವಾ ಅನುಸೂಚಿತ 1 ನೇ ಖಂಡಿಕೆಯ ಸ್ವತ್ತನ್ನು ನನ್ನ ಅಜ್ಜಿ ದಿನಾಂಕ 21.12.1970 ರಂದು ಸಿದ್ದರಾಮೇಶ್ವರ ಮತ್ತು ಗಂಗಮ್ಮ ದಂಪತಿಗಳಿಂದ ನೋಂದಣಿ ಕ್ರಯಪತ್ರದಂತೆ ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಅನುಸೂಚಿತ 1 ನೇ ಖಂಡಿಕೆಯ ಸ್ವತ್ತು ನನ್ನ ಅಜ್ಜಿಯ ತವರು ಮನೆಯಾದ ರಾಮಗಿರಿಯಲ್ಲಿ ಇದ್ದ ಕಾರಣ ಸದರಿ ಸ್ವತ್ತನ್ನು ನನ್ನ ಅಜ್ಜಿಯ ತವರು ಮನೆಯವರೆ ನನ್ನ ಅಜ್ಜಿಯ ಪರವಾಗಿ ನಿರ್ವಹಣೆ ಮಾಡುತ್ತಿದ್ದರು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಮುಂದುವರೆದು ನನ್ನ ತಂದೆ ಜಮೀನನ್ನು ನೋಡಿಕೊಳ್ಳುತ್ತಿದ್ದು, ಕೆಲವು ದಿನಗಳ ಕಾಲ ನನ್ನ ತಾಯಿಯು ಸಹ ರಾಮಗಿರಿಯಲ್ಲಿ ಇದ್ದರು ಎಂದು ಹೇಳುತ್ತಾರೆ.

4. ದಾವಾ ಅನುಸೂಚಿತ 1 ನೇ ಖಂಡಿಕೆಯ ಸ್ವತ್ತು ನನ್ನ ಅಜ್ಜಿಯಾದ ಪುಟ್ಟಮ್ಮರವರ ಸ್ವಂತ ಸ್ವತ್ತು ಎಂದರೆ ಸರಿ. ನನ್ನ ಅಜ್ಜಿ ಪುಟ್ಟಮ್ಮರವರು ಮೃತಪಟ್ಟಿರುತ್ತಾರೆ. ದಾವಾ ಅನುಸೂಚಿತ 1 ನೇ ಖಂಡಿಕೆಯ ಸ್ವತ್ತು ನನ್ನ ಅಜ್ಜಿಯ ಮರಣಾನಂತರ ಆಕೆಯ 5 ಮಂದಿ ಮಕ್ಕಳಿಗೆ ಸೇರುತ್ತದೆ ಎಂದರೆ ಸರಿ. ನನ್ನ ಅಜ್ಜಿಯ ಮರಣಾ ನಂತರ ಆಕೆಯ 5 ಮಂದಿ ಮಕ್ಕಳು ಮಾತ್ರ 1 ನೇ ಖಂಡಿಕೆಯ ಸ್ವತ್ತಿನ ಮಾಲೀಕರಾಗಿರುತ್ತಾರೆ ಎಂದರೆ ಸರಿ. ನನ್ನ ಅಜ್ಜಿಯ ಸ್ವತ್ತಿನ ಕುರಿತು ನನ್ನ ತಂದೆಯೂ ಸೇರಿದಂತೆ ನನ್ನ ಅಜ್ಜಿಯ 5 ಮಂದಿ ಮಕ್ಕಳಿಗೆ ಮಾತ್ರ ಹಕ್ಕು ಇದ್ದು, ಬೇರೆಯವರಿಗೆ ಹಕ್ಕು ಇಲ್ಲ ಎಂದರೆ ಸಾಕ್ಷಿ ನಮಗೆ ಇದೆ ಎಂದು ಹೇಳುತ್ತಾರೆ. 1 ರಿಂದ 5 ನೇ ಪ್ರತಿವಾದಿಯರು ದಾವಾ ಅನುಸೂಚಿತ 1 ನೇ ಖಂಡಿಕೆಯ ಸ್ವತ್ತು ಅವರ ತಾಯಿಯ ಸ್ವಂತ ಸ್ವತ್ತಾಗಿದ್ದ ಕಾರಣ 6 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ನಮಗೆ ಗೊತ್ತಿಲ್ಲದೆ 1 ನೇ ಪ್ರತಿವಾದಿಯ ಅಳಿಯನಿಗೆ ಮಾರಾಟ ಮಾಡಿದ್ದಾರೆ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿ ಸ್ವಂತ ಸ್ವತ್ತಾದ ಕಾರಣ ನಮಗೆ ತಿಳಿಸದೆ ಮಾರಾಟ ಮಾಡಬಹುದು ಎಂದರೆ ಸರಿಯಲ್ಲ.

5. ವಾದ ಪತ್ರದಲ್ಲಿ ದಾವಾ ಅನುಸೂಚಿತ 1 ನೇ ಖಂಡಿಕೆಯ ಸ್ವತ್ತು ಒಟ್ಟು ಕುಟುಂಬದ ಆದಾಯದಿಂದ ಅರ್ಜಿಸಿದಂತಹ ಸ್ವತ್ತು ಎಂದು ಬರೆಸಿದ್ದೀರಾ ಎಂದರೆ ಸಾಕ್ಷಿ ನಮಗೆ ತಿಳುವಳಿಕೆ ಇಲ್ಲದ ಕಾರಣ ಗೊತ್ತಿಲ್ಲ ಎಂದು ಹೇಳುತ್ತಾರೆ. 1970 ನೇ ಸಾಲಿನಲ್ಲಿ ಕ್ರಯಪತ್ರ ಏರ್ಪಟ್ಟ ಕಾಲಕ್ಕೆ ನಾನು ಜನಿಸಿರಲಿಲ್ಲ ಎಂದರೆ ಸರಿ. ದಾವಾ ಅನುಸೂಚಿತ 1 ನೇ ಖಂಡಿಕೆಯ ಸ್ವತ್ತು 6 ನೇ ಪ್ರತಿವಾದಿಯ ಸ್ವಾದೀನತೆಯಲ್ಲಿ ಇದೆ ಎಂದರೆ ಸರಿ. ದಾವಾ ಅನುಸೂಚಿತ 1 ನೇ ಖಂಡಿಕೆಯ ಸ್ವತ್ತಿನ ಕುರಿತು ನನಗೆ ಯಾವುದೇ ಹಕ್ಕು, ಹಿತಾಸಕ್ತಿ ಮತ್ತು ಹಿಸ್ಸೆ ಇಲ್ಲ ಎಂದರೆ ಸರಿಯಲ್ಲ.

6. ಪ್ರತಿವಾದಿಯರು ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿನ ಅಂಶಗಳ ಕುರಿತು ನಾನು ತಿಳಿದುಕೊಂಡಿಲ್ಲ. ನಿಪಿ.2 ರ ನೋಂದಣಿ ವಿಭಾಗ ಪತ್ರದ ಕಾಲಕ್ಕೆ ನಾವು ಹೋಗಿಲ್ಲ ಎಂದರೆ ಸಾಕ್ಷಿ ನಮಗೆ ಗೊತ್ತಿಲ್ಲದಂತೆ ಪಾಲುವಿಭಾಗ ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ. ದಾವಾ ಅನುಸೂಚಿತ 7 ನೇ ಖಂಡಿಕೆಯ ಸ್ವತ್ತು ನಮ್ಮ ಪಿತ್ರಾರ್ಜಿತ ಸ್ವತ್ತು ಆಗಿರುತ್ತದೆ. ಆ ಬಗ್ಗೆ ದಾಖಲಾತಿ ಹಾಜರುಪಡಿಸಿದ್ದೇನೆ. ದಾವಾ ಅನುಸೂಚಿತ 4 ರಿಂದ 7 ನೇ ಖಂಡಿಕೆಯ ಸ್ವತ್ತುಗಳ ಕುರಿತು ನಿಪಿ.2 ರ ನೋಂದಣಿ ವಿಭಾಗ ಪತ್ರದಲ್ಲಿ ಉಲ್ಲೇಖ ಇಲ್ಲದಿರುವ ಬಗ್ಗೆ ವಾದ ಪತ್ರದಲ್ಲಿ ಉಲ್ಲೇಖ ಮಾಡಿದ್ದೀರಾ ಎಂದರೆ ಸಾಕ್ಷಿ ಸದರಿ ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತುಗಳಾಗಿದ್ದು ಆ ಬಗ್ಗೆ ದಾಖಲಾತಿಗಳನ್ನು ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ದಾವಾ ಅನುಸೂಚಿತ 4 ರಿಂದ 7 ನೇ ಖಂಡಿಕೆಯ ಸ್ವತ್ತುಗಳು ನಮ್ಮ ಕುಟುಂಬಕ್ಕೆ ಸೇರಿದ ಪಿತ್ರಾರ್ಜಿತ ಸ್ವತ್ತುಳಾಗಿರುತ್ತವೆ. ನನ್ನ ಅಜ್ಜನಾದ ಸಿದ್ದಪ್ಪರವರಿಗೆ ಎಷ್ಟು ಜನ ಅಣ್ಣ ತಮ್ಮಂದಿರು ಎಂದು ಗೊತ್ತಿಲ್ಲ. ದಾವಾ ಅನುಸೂಚಿತ 4 ರಿಂದ 7 ನೇ ಖಂಡಿಕೆಯ ಸ್ವತ್ತುಗಳು ನನ್ನ ಅಜ್ಜನಾದ ಸಿದ್ದಪ್ಪ ಮತ್ತು ಆತನ ಸಹೋದರರು ಮಾಡಿಕೊಂಡಂತಹ ವಿಭಾಗ ಪತ್ರದ ಮೂಲಕ ಬಂದಿದ್ದವ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ದಾವಾ ಅನುಸೂಚಿತ 4 ರಿಂದ 7 ನೇ ಖಂಡಿಕೆಯ ಸ್ವತ್ತುಗಳನ್ನು ನನ್ನ ಅಜ್ಜನಾದ ಸಿದ್ದಪ್ಪರವರು ಸ್ವಂತ ಆದಾಯದಿಂದ ಗಳಿಸಿದ್ದರ ಎಂಬ ಬಗ್ಗೆ ಗೊತ್ತಿಲ್ಲ. ದಾವಾ ಅನುಸೂಚಿತ 4 ರಿಂದ 7 ನೇ ಖಂಡಿಕೆಯ ಸ್ವತ್ತುಗಳು ನನ್ನ ಅಜ್ಜನಾದ ಸಿದ್ದಪ್ಪರವರಿಗೆ ಆತನ ತಂದೆಯ ಮೂಲಕ ಬಂದಿದ್ದವು. ಆ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸುತ್ತೇನೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ